### ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲಸಂಪನ್ಮೂಲ ನಿರ್ವಹಣೆ ಹೂಡಿಕೆ ಕಾರ್ಯಕ್ರಮ

# ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆ

### ನೆರವು: ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್



## ಸಾಮಾಜಿಕ ಮತ್ತು ಲಿಂಗತ್ವ ಪರಿಕಲ್ಪನೆ

ಕರ್ನಾಟಕ ಸರ್ಕಾರವು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಆರ್ಥಿಕ ನೆರವಿನೊಂದಿಗೆ ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಕರ್ನಾಟಕ ನೀರಾವರಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಯಲ್ಲಿ ಸಹಭಾಗಿತ್ವ ನೀರು ನಿರ್ವಹಣೆ ತತ್ತ್ವದಡಿ ಯೋಜನಾ ವ್ಯಾಪ್ತಿಯ ಅಚ್ಚುಕಟ್ಟುದಾರರು, ಮಹಿಳೆಯರು, ಭೂರಹಿತರು ಹಾಗೂ ಹಿಂದುಳಿದ ವರ್ಗದವರನ್ನು ಒಳಗೊಳ್ಳುವಂತೆ ಮಾಡುವುದು ಪ್ರಮುಖವಾದುದಾಗಿದೆ.

ಈ ನಿಟ್ಟಿನಲ್ಲಿ ಪ್ರತಿ ನೀರು ಬಳಕೆದಾರರ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಮಹಿಳಾ ಉಪಸಮಿತಿಗಳನ್ನು ರಚಿಸಿ, ಸಾಮರ್ಥ್ಯವರ್ಧನೆಗೊಳಿಸಿ ಯೋಜನೆಯ ವಿವಿಧ ಹಂತಗಳಲ್ಲಿ ಅವು ಪರಿಣಾಮಕಾರಿಯಾಗಿ ಪಾಲ್ಗೊಳ್ಳಲು ತರಬೇತಿಗಳನ್ನು ನೀಡಲಾಗುವುದು. ಅಲ್ಲದೆ ಯೋಜನೆಯಡಿಯಲ್ಲಿ ಮುಖ್ಯ ಕಾಲುವೆಗಳ ಪುನಶ್ಚೇತನ, ಅಚ್ಚುಕಟ್ಟಿನಲ್ಲಿ ಕೃಷಿ ಉತ್ಪಾದನೆ ಹೆಚ್ಚಿಸುವುದು, ಕಾಲುವೆ ಕೊನೆಯ ರೈತರಿಗೂ ನೀರು ತಲುಪುವಂತೆ ಮಾಡುವುದು, ನೀರಿನ ಸಮರ್ಪಕ ಬಳಕೆ, ನೀರು ಬಳಕೆದಾರರ ಸಹಕಾರ ಸಂಘಗಳ ಮೂಲಕ ಕಾಮಗಾರಿ ನಿರ್ವಹಣೆ ಮತ್ತು ಉಸ್ತುವಾರಿ, ನೀರಿನ ಕರ ಸಂಗ್ರಹಣೆ ಮಾಡುವುದು, ಸಂಘಗಳ ಸಾಮರ್ಥ್ಯ ಬಲವರ್ಧನೆ, ಕೃಷಿಯಲ್ಲಿ ನೀರಿನ ಪರಿಣಾಮಕಾರಿ ಬಳಕೆಗೆ ಉತ್ತೇಜನ ಮುಂತಾದ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಜೊತೆಗೆ ಈ ಚಟುವಟಿಕೆಗಳಲ್ಲಿ ಸಾಮಾಜಿಕವಾಗಿ ದುರ್ಬಲ ವರ್ಗದವರು ಮತ್ತು ಮಹಿಳೆಯರ ಭಾಗವಹಿಸುವಿಕೆ, ಉತ್ತೇಜಿಸಲು ಹಲವು ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ. ಎ.ಡಿ.ಬಿ ಮಾರ್ಗದರ್ಶಿ ಸೂತ್ರಗಳನ್ವಯ ಸಾಮಾಜಿಕ ಮತ್ತು ಲಿಂಗತ್ವ ಪರಿಕಲ್ಪನೆಯ ಗುರಿ, ಉದ್ದೇಶಗಳು, ನಿರೀಕ್ಷಿತ ಪರಿಣಾಮಗಳು ಮತ್ತು ಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತ ವಿವರ ಇಲ್ಲಿದೆ.

**ಗುರಿ**

ಸಾಮಾಜಿಕವಾಗಿ ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಉತ್ತೇಜನ ನೀಡುವ ಮೂಲಕ ಗ್ರಾಮೀಣ ಜೀವನಮಟ್ಟ ಸುಧಾರಣೆ ಮಾಡುವುದು, ಸಾಮಾಜಿಕ ಮತ್ತು ಲಿಂಗತ್ವ ಪರಿಕಲ್ಪನೆಯ ಮುಖ್ಯ ಗುರಿಯಾಗಿದೆ.

**ಉದ್ದೇಶಗಳು**

- ಮಹಿಳೆಯರು ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳು ಸಕ್ರಿಯವಾಗಿ ಭಾಗವಹಿಸಲು ವಿಶೇಷ ಆದ್ಯತೆ ನೀಡುವುದು.
- ನೀರು ಬಳಕೆದಾರರ ಸಹಕಾರ ಸಂಘಗಳ ಮತ್ತು ಮಹಿಳಾ ಉಪಸಮಿತಿಗಳ ಸಾಮರ್ಥ್ಯವರ್ಧನೆ ಮೂಲಕ ಅವುಗಳನ್ನು ಸಶಕ್ತ ಸಂಸ್ಥೆಗಳನ್ನಾಗಿ ರೂಪಿಸುವುದು.
- ಸಹಭಾಗಿತ್ವ ನೀರಾವರಿ ನಿರ್ವಹಣೆ ಪ್ರಕ್ರಿಯೆಯಲ್ಲಿ ಎಲ್ಲಾ ವರ್ಗ ಹಾಗೂ ಪುರುಷ ಮತ್ತು ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸುವುದು.
- ಅಚ್ಚುಕಟ್ಟಿನ ಎಲ್ಲಾ ರೈತರಿಗೆ ನೀರಿನ ಸಮಾನ ಹಂಚಿಕೆ, ನಿರ್ದಿಷ್ಟವಾಗಿ ಮಹಿಳೆಯರು, ಸಣ್ಣ, ಅತಿಸಣ್ಣ ಹಾಗೂ ಕಾಲುವೆ ಕೊನೆಯ ಭಾಗದ ರೈತರಿಗೆ ಹೆಚ್ಚಿನ ಆದ್ಯತೆ ದೊರೆಯುವಂತೆ ಮಾಡುವುದು.

**ನಿರೀಕ್ಷಿತ ಪರಿಣಾಮಗಳು**

- ಕಾಮಗಾರಿಗಳ ಪರಿಶೀಲನೆ, ಗುಣಮಟ್ಟ ಖಾತ್ರಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಳ.
- ಗ್ರಾಮಮಟ್ಟದ ಸಂಸ್ಥೆಗಳಾದ ನೀರು ಬಳಕೆದಾರರ ಸಹಕಾರ ಸಂಘಗಳಲ್ಲಿ ಮಹಿಳೆಯರು ಮತ್ತು ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ಹೆಚ್ಚಳ.
- ಸಾಮಾಜಿಕವಾಗಿ ಹಿಂದುಳಿದ ವರ್ಗ ಮತ್ತು ಮಹಿಳೆಯರಲ್ಲಿ ಸಂಘಟನೆ, ನಾಯಕತ್ವ ಮತ್ತು ತೀರ್ಮಾನ ತೆಗೆದುಕೊಳ್ಳುವ ಮನೋಭಾವ ವೃದ್ಧಿ.
- ಸುಸ್ಥಿರ ಕೃಷಿ ಅಳವಡಿಕೆ ಮೂಲಕ ನೀರು ನಿರ್ವಹಣೆ, ಬೆಳೆ ವೈವಿಧ್ಯತೆ ಮತ್ತು ಉಸ್ತುವಾರಿಯಲ್ಲಿ ಸಾಮಾಜಿಕವಾಗಿ ಹಿಂದುಳಿದ ವರ್ಗ ಮತ್ತು ಮಹಿಳೆಯರ ಜ್ಞಾನ ಹೆಚ್ಚಳ.
- ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳು ಹಾಗೂ ಇತರೆ ಬಳಕೆಗೆ ಸುಲಭವಾಗಿ ನೀರಿನ ಲಭ್ಯತೆ.

**ಯೋಜನೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ಕೈಗೊಂಡಿರುವ ಚಟುವಟಿಕೆಗಳು**

- ಯೋಜನೆಯಲ್ಲಿ ಮಹಿಳಾ ಸಮುದಾಯ ಸಂಘಟಕರನ್ನು ನೇಮಿಸಿದ್ದು ಮಹಿಳಾ ಖಾತೆದಾರರ ಹೆಚ್ಚಿನ ಭಾಗವಹಿಸುವಿಕೆಗೆ ಪ್ರೇರಣೆಯಾಗಿದೆ.
- ವಿಜಯನಗರ ನೀರಾವರಿ ಕಾಲುವೆಗಳ ವ್ಯಾಪ್ತಿಯ ನೀರು ಬಳಕೆದಾರ ಸಹಕಾರ ಸಂಘಗಳಲ್ಲಿ ಮಹಿಳಾ ಸದಸ್ಯತ್ವ ಹೆಚ್ಚಿಸಲು ಕ್ರಮವಹಿಸುವುದು.
- ಸಂಘಗಳ ಆಡಳಿತ ಮಂಡಳಿಯಲ್ಲಿ ಕನಿಷ್ಟ ಶೇಕಡ 30ರಷ್ಟು ಮಹಿಳಾ ಪ್ರಾತಿನಿಧ್ಯ ಇರುವಂತೆ ನೋಡಿಕೊಳ್ಳುವುದು.
- ಪ್ರತಿ ನೀರು ಬಳಕೆದಾರರ ಸಹಕಾರ ಸಂಘದ ವ್ಯಾಪ್ತಿಯಲ್ಲಿ ಕನಿಷ್ಟ 15 ಸದಸ್ಯರನ್ನೊಳಗೊಂಡ ಮಹಿಳಾ ಉಪಸಮಿತಿಗಳ ರಚನೆ ಮೂಲಕ ಪಾಲ್ಗೊಳ್ಳುವಿಕೆಗೆ ಉತ್ತೇಜನ ನೀಡುವುದು.
- ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಗ್ರಾಮಗಳಲ್ಲಿ ಪ್ರತ್ಯೇಕ ಮಹಿಳಾ ಸಭೆಗಳನ್ನು ಆಯೋಜಿಸುವುದು.
- ಸಂಘದ ಆಡಳಿತ, ನಾಯಕತ್ವ ಹಾಗೂ ದಾಖಲಾತಿ ನಿರ್ವಹಣೆ ತರಬೇತಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಆದ್ಯತೆ ನೀಡುವುದು.
- ನೀರು ಬಳಕೆದಾರರ ಸಹಕಾರ ಸಂಘಗಳಿಗೆ ರೂ. 25 ಪಾವತಿಸುವ ಮೂಲಕ ಸದಸ್ಯತ್ವ ಪಡೆಯಬಹುದು. (ಇವರಿಗೆ ಮತ ಚಲಾವಣೆ ಹಕ್ಕು ಇರುವುದಿಲ್ಲ)
- ಉಪಸಮಿತಿಗಳಿಂದ 4 ಮಹಿಳಾ ಸದಸ್ಯರನ್ನು 'ಡಿ' ವರ್ಗದಡಿಯಲ್ಲಿ ಆಯ್ಕೆ ಮಾಡಿ, ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲು ಆಹ್ವಾನಿಸಲಾಗುವುದು.
- ಮಹಿಳೆಯರು ಕೃಷಿ, ಕೃಷಿ ಪ್ರಾತ್ಯಕ್ಷಿಕೆ ಹಾಗೂ ಕೃಷಿ ಆಧಾರಿತ ಜೀವನೋಪಾಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಉತ್ತೇಜಿಸುವುದು.
- ಅಧ್ಯಯನ ಪ್ರವಾಸ, ತರಬೇತಿಗಳು ಹಾಗೂ ಕಾರ್ಯಾಗಾರಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಆದ್ಯತೆ ನೀಡಲಾಗುವುದು.
- ಉಸ್ತುವಾರಿ ಮತ್ತು ನಿರ್ವಹಣೆಯಲ್ಲಿ ಮಹಿಳೆಯರು ಕ್ರಿಯಾಶೀಲವಾಗಿ ಭಾಗವಹಿಸಲು ಸೂಕ್ತ ಸಾಮರ್ಥ್ಯವರ್ಧನೆ ಮಾಡುವುದು.
- ಯೋಜನಾ ಅನುಷ್ಠಾನದ ಎಲ್ಲಾ ಹಂತಗಳಲ್ಲೂ ಮಹಿಳೆಯರ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಪಾಲ್ಗೊಳ್ಳುವಿಕೆಗೆ ಉತ್ತೇಜನ ನೀಡುವುದು.
- ಪುರುಷರು ಮತ್ತು ಮಹಿಳೆಯರಿಗೆ ಯೋಜನೆಗೆ ಸಂಬಂಧಿಸಿದಂತೆ ನಿರ್ಣಯ ಕೈಗೊಳ್ಳುವ ಹಂತಗಳಲ್ಲಿ ಸಮಾನ ಅವಕಾಶ ಮತ್ತು ಜವಾಬ್ದಾರಿಗಳನ್ನು ನೀಡುವುದು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**


**ಕರ್ನಾಟಕ ನೀರಾವರಿ ನಿಗಮ ನಿಯಮಿತ**
ಮುಖ್ಯ ಇಂಜಿನಿಯರ್, ಯೋಜನಾ ಅನುಷ್ಠಾನ ಕಛೇರಿ
ಮುನಿರಾಬಾದ್, ಕೊಪ್ಪಳ ಜಿಲ್ಲೆ – 583233

**ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ಆಡಳಿತಾಧಿಕಾರಿಗಳು, ತುಂಗಭದ್ರಾ ಯೋಜನೆ
ಮುನಿರಾಬಾದ್, ಕೊಪ್ಪಳ ಜಿಲ್ಲೆ– 583233

**ಯೋಜನಾ ಸಹಾಯ ಸಂಸ್ಥೆ**
ಎಸ್.ಎಂ.ಇ.ಸಿ. (ಇಂಡಿಯಾ)
ನಂ 3/662, 5ನೇ ಅಡ್ಡರಸ್ತೆ, ಎಸ್.ವಿ.ಕೆ. ದೇವಾಲಯದ ಎದುರು
ಪಟೇಲ್ ನಗರ, ಹೊಸಪೇಟೆ 583201

**ಸಹಯೋಗ : ವಿಜಯನಗರ ನೀರು ಬಳಕೆದಾರರ ಸಹಕಾರ ಸಂಘಗಳು**


**ಮಹಿಳೆಯರ ಪಾಲ್ಗೊಳ್ಳುವಿಕೆಯ ಹಾದಿ, ಯೋಜನೆ ಯಶಸ್ಸಿಗೆ ಭದ್ರ ಬುನಾದಿ**